ಸೆರೆಹಿಡಿಯುವ ಧೈರ್ಯ ಮಾಡಿದ್ದು ಹೇಗೆ?"

ಎಲ್ಲ ಪ್ರಶ್ನೆಗಳಿಗೆ ಅಲ್ಲಿಯೇ ಉತ್ತರ ಸಿಗುತ್ತದೆ ಎಂದು ಗೊತ್ತು. ಆದರೆ, ಪೊಲೀಸ್ ಶೈಲಿಯಲ್ಲಿ ಕೇಳಲಾರ. ಅದಕ್ಕೇ ಸುನಿಲ್‌ನನ್ನು ಕಳುಹಿಸಿದ. ಸುನಿಲ್ ತನ್ನ ಪತ್ರಕರ್ತನ ಅನುಭವ ಬಳಸಿ ಗಾರ್ಡ್ ಅನ್ನು ಮಾತನಾಡಿಸಿದ: "ಈ ಮನೆ ಏನಾದರೂ ಸಿನಿಮಾ ಶೂಟಿಂಗ್‌ಗೆ ಕೊಡ್ತಾರಾ..." ತನಗೂ ಅದಕ್ಕೂ ಸಂಬಂಧವೇ ಇಲ್ಲ ಎಂಬಂತೆ ಆ ಗಾರ್ಡ್ ಇನ್ನೊಬ್ಬನ ಕಡೆ ಕೈ ತೋರಿದ. ಅವನು "ಸರ್, ವಾರ ವಾರ ನಮ್ಮ ಡ್ಯೂಟಿ ಬದಲಾಗುತ್ತೆ. ಇದನ್ನೆಲ್ಲ ಮ್ಯಾನೇಜರ್ ನೋಡಿಕೊಳ್ಳುತ್ತಾರೆ. ಅವರು ವಾರದಿಂದ ರಜ ಹಾಕಿದ್ದಾರೆ. ಅವರ ನಂಬರ್ ತಗೊಂಡು ಮಾತಾಡಿ."

ಗಂಗಾಧರನಿಗೆ ಗೊತ್ತಿತ್ತು ಅದರಿಂದ ಏನೂ ಉಪಯೋಗ ಇಲ್ಲ ಎಂದು. ಒಂದು ವಾರದಿಂದ ಬಂದಿಲ್ಲ ಅಂದರೆ... ಬರುವುದೂ ಇಲ್ಲ. ಯಾವ ಸುಳಿವು ಕೂಡಾ ಸಿಗಬಾರದೆಂಬ ಮುನ್ನೆಚ್ಚರಿಕೆ!

ಎಸಿಪಿ ಶಿವಣ್ಣ ಗಂಗಾಧರ ಮತ್ತೆ ಅದೇ ಜಾಗದಲ್ಲಿ ಸೇರಿದ್ದರು. ಅವರಿಬ್ಬರ ಮಧ್ಯೆ ತಮ್ಮ ತಮ್ಮ ಕೆಲಸಗಳ ವಿಚಾರ ವಿಮರ್ಶೆ ಮಾಡತೊಡಗಿದರು.

"ನನಗೇನೋ ಈ ಮ್ಯಾನೇಜರ್ ಕೂಡಾ ಇದರಲ್ಲಿ ಇದ್ದಾನೆ ಅನಿಸುತ್ತಿದೆ ಗಂಗಾಧರ್. ಅದಕ್ಕೇ ಗೃಹ ಕಾರ್ಯದರ್ಶಿಗಳು ತಮ್ಮ ಡ್ರೈವರ್ ಹಾಗೂ ಇತರೇ ಅನಾಮಧೇಯ ವ್ಯಕ್ತಿಗಳು ಎಂದು ಕಂಪ್ಲೇಂಟ್ ಕೊಟ್ಟಿದ್ದಾರೆ... ಅವನನ್ನ ಹಿಡಿದರೆ ಎಲ್ಲ ಹೊರಬೀಳುತ್ತದೆ."

"ಸರ್, ನನಗೇನೋ ನಾವು ಸಣ್ಣ ಮೀನನ್ನು ಹಿಡಿಯಲು ಗಾಳ ಹಾಕುತ್ತಿದ್ದೇವೆ ಅನಿಸುತ್ತಿದೆ. ಆ ಡ್ರೈವರ್ ಒಂದು ತಿಂಗಳ ಹಿಂದೆ ಮನೆ ಬದಲಾಯಿಸಿ ಅಲ್ಲಿಗೆ ಬಂದಿದ್ದಾನೆ. ಯಾರಿಗೂ ಅವನ ಬಗ್ಗೆ ಗೊತ್ತಿಲ್ಲ. ಈಗ ನಾಪತ್ತೆಯಾಗಿದ್ದಾನೆ. ಫಾರಂ ಹೌಸ್‌ನ ಮ್ಯಾನೇಜರ್ ವಾರದಿಂದ ಕೆಲಸಕ್ಕೆ ಬಂದಿಲ್ಲ. ನನ್ನ ಅನುಮಾನ ನಿಜ ಆಗಿದ್ದರೆ ಅವನೂ ನಾಪತ್ತೆ ಆಗಿರಬೇಕು..."

ಅವನ ಮಾತಿಗೆ ತಲೆ ಆಡಿಸುತ್ತ ಎಸಿಪಿ ಶಿವಣ್ಣ, "ಈ ಸತ್ಯ ಹೊರಬರಲು ಒಂದು ದಾರಿ ಇದೆ. ಮೊದಲು ಆ ಫಾರಂ ಹೌಸ್‌ನ ಮುಂದೆ ಒಂಡೆರಡು ಇನ್‌ಫಾರ್ಮರ್‌ಗಳನ್ನು ಹಾಕು. ಹಾಗೆಯೇ ಒಂದು ಸಣ್ಣ ನಾಟಕ ಆಡಬೇಕು. ಅದಕ್ಕೆ ಯಾರು ಪ್ರತಿಕ್ರಿಯಿಸುತ್ತಾರೆ, ಯಾರು ತಪ್ಪು ಹೆಜ್ಜೆ ಇಡುತ್ತಾರೆ ಎಂದು ನೋಡೋಣ... ಅದಕ್ಕೂ ಮುಂಚೆ ಕೆಲವೊಂದು ಕೆಲಸ ಮಾಡು... ಅದರರ್ಥ ಸುನಿಲ್ ಮುಖಾಂತರ ಅಂತ..." ಎಂದು ಅವನು ಮಾಡಬೇಕಿದ್ದ ಕೆಲಸಗಳನ್ನೆಲ್ಲ ವಿವರಿಸಿ ಮುಂದಿನ ಹೆಜ್ಜೆಗೆ ಅಣಿಯಾದ.

ತನ್ನ ಮುಂದಿನ ಹೆಜ್ಜೆಗೆ ಎಸಿಪಿ ಶಿವಣ್ಣ ಹೆಚ್ಚು ಸಮಯ ಕಾಯಬೇಕಿರಲಿಲ್ಲ. ಎರಡನೇ ದಿನದ ಸಾಯಂಕಾಲಕ್ಕೆ ಅವನು ಆಗಬೇಕು ಎಂದುಕೊಂಡಿದ್ದ ಕೆಲಸಗಳೆಲ್ಲ ಮುಗಿದಿದ್ದವು. ಕೊಂಚವೂ ತಡಮಾಡದೇ ಕಮಿಷನರ್‌ಗೆ ಫೋನ್ ಮಾಡಿದ.

"ಸರ್ ಗೃಹ ಕಾರ್ಯದರ್ಶಿ ಅವರ ಡ್ರೈವರ್ ಕೇಸ್‌ನಲ್ಲಿ ಒಂದು ಹೊಸ ಲೀಡ್ ಸಿಕ್ಕಿದೆ. ಅವನ ಹಿಂದೆ ಬೇರೆ ಯಾರೋ ಇದ್ದಾರೆ ಎಂದು ತಿಳಿದು ಬಂದಿದೆ. ಕೇಸ್ ಆಗಲೇ ಕ್ಲೋಸ್ ಆಗಿದೆ ಹಾಗೂ ಇದು ಒಂದು ಪ್ರೈವೇಟ್ ಕಂಪ್ಲೇಂಟ್... ಏನು ಮಾಡಲಿ?"

ಆ ಮಾತು ಕೇಳಿ ಕಮಿಷನರ್ ಸ್ವಲ್ಪ ವಿಚಲಿತರಾದರೂ ಸಾವರಿಸಿಕೊಂಡು, "ಸ್ವಲ್ಪ ಇರ್ರೀ ನಾನು ಸಾಹೇಬರನ್ನು ಒಮ್ಮೆ ಮಾತಾಡಿಸಿ ನಂತರ ಹೇಳುತ್ತೇನೆ... ಹಾಂ ಅದರ ಬಗ್ಗೆ ವಿವರಗಳನ್ನು ತೆಗೆದುಕೊಂಡು ಆಫೀಸ್‌ಗೆ ತಕ್ಷಣ ಬನ್ನಿ..." ಎಂದು ಅಪ್ಪಣೆ ಮಾಡಿದರು. ಎಸಿಪಿ ಶಿವಣ್ಣ ಅವರ ಧ್ವನಿಯಲ್ಲಿದ್ದ ಗಾಬರಿಯನ್ನು ಗಮನಿಸದೇ ಇರಲಿಲ್ಲ.

ಶಿವಣ್ಣನ ಗುರಿ ಸರಿಯಾಗಿಯೇ ಮುಟ್ಟಿತ್ತು. ಅರ್ಧ ಗಂಟೆಯೊಳಗೆ ಗೃಹ ಕಾರ್ಯದರ್ಶಿ ಅವರ